ನಿಂತಿರುತ್ತಿದ್ದ ಹಳ್ಳಿಮನೆಯ ಅನೇಕ ಕೆಲಸಕಾರ್ಯಗಳು ಪುಣ್ಯಮ್ಮನ ತಲೆ ಕಾಣುತ್ತಿದ್ದಂತೆ ಮನೆ ಹೆಂಗಸರ ನಿಡಿಯುಸಿರಿನೊಂದಿಗೆ ಚಾಲನೆ ಪಡೆಯುತ್ತಿದ್ದುವು. ಮೂಟೆಗಟ್ಟಲೆ ಅಕ್ಕಿ ತೊಳೆಸಿ ಚೊಕ್ಕ ಮಾಡುವುದಿರಲಿ, ಮೂಲೆಮುಡುಕುಗಳ ಬಲೆ ಝಾಡಿಸುವುದಿರಲಿ, ಹಬ್ಬ ಹುಣ್ಣಿಮೆಗೆ ಅಟ್ಟದ ಮೇಲಿನ ಪಾತ್ರೆಗಳನ್ನು ಇಳಿಸಿ ಫಳ್ಳನೆ ಹೊಳೆಯುವಂತೆ ಹುಳಿ, ಬೂದಿ ಹಚ್ಚಿ ಬೆಳಗಿಡುವುದಿರಲಿ, ಅಂಗಳ ಬಾಗಿಲು ಸಾರಿಸುವುದಿರಲಿ, ಯಾವ ಕೆಲಸಕ್ಕೆ ಆಗುವುದಿಲ್ಲ ಅನ್ನುತ್ತಿದ್ದಳು ಪುಣ್ಯಮ್ಮ? ಸೆರಗು, ನಿರಿಗೆ ಸೊಂಟಕ್ಕೆ ಬಿಗಿದರೆ ದೈತ್ಯ. ಪುಣ್ಯಮ್ಮ ಮಾಡದೆ ಇದ್ದ ಕೆಲಸ ಒಂದೇ. ವರಳಲ್ಲಿ ಸೀಗೇಕಾಯಿ ಕುಟ್ಟಿ ಪುಡಿ ಮಾಡುವ ಕೆಲಸ ಅಂದರೆ ತಾನು ಮಾಡುವುದಿರಲಿ, ಅಂತಾ ಕೆಲಸ ನಡೆಯುತ್ತಿದೆ ಎಂದು ಗೊತ್ತಾದ ಮನೆಯ ಆಸುಪಾಸು ಸುಳಿದಾಡುತ್ತಿರಲಿಲ್ಲ ಪುಣ್ಯಮ್ಮ. ಕಾರಣ ಅರ್ಥವಾಗುತ್ತಿದೆ ತಾನೇ? ಸೀಗೇಕಾಯಿ ಕುಟ್ಟುವ ಮನೆಯಲ್ಲಿ ಮೂಗು ಕಳಚಿ ಬೀಳುತ್ತದೆಯೆನ್ನುವಷ್ಟು ಸೀನಿ ಸೀನಿ ಮಗ ಸೋತು ಸೊಪ್ಪಾಗಬಾರದು ಎನ್ನುವುದು ಹೆತ್ತಮ್ಮನ ಕಾಳಜಿ. ಎಲ್ಲಿಗೆ ಹೋದರೂ 'ಹಚ ಹಚಾ...' ಅನ್ನಿಸಿಕೊಳ್ಳದೆ, 'ಬಾರೇ ಪುಣ್ಯಾತ್ಗಿತ್ತಿ, ನಿಂಗೆ ನೂರೊರ್ಷ ಆಯುಸ್ಸು. ಬೆಳಿಗ್ಗೆ ಮುಂಚೆ ನಿನ್ನ ನೆನಪು ಮಾಡ್ಕಂಡಿದ್ದೆ' ಎಂದು ಸ್ವಾರ್ಥಕ್ಕಾದರೂ ಸರಿ, ಹಾರ್ದಿಕವಾಗಿ ಬರಮಾಡಿಕೊಳ್ಳುತ್ತಿದ್ದ ಮನೆಗಳಲ್ಲಿ ಪುಣ್ಯಮ್ಮನಿಗೆ ಒಂದು ಕೆಟ್ಟ ಹೆಸರು ಅಂಟಿತ್ತು. ಅವಳ ದೃಷ್ಟಿ ಸರಿಯಿಲ್ಲ ಎನ್ನುವ ಕಳಂಕ. ಯಾರಾದರೂ ಹೊಸ ಸೀರೆ ಉಟ್ಟಿದ್ದನ್ನು ನೋಡಿ, "ಎಷ್ಟು ವೈನಾಗಿದೆ ಕಣ್ರೇ, ನಿಮಗೆ ಲಾಯ್ಕು ಒಪ್ಪುತ್ತೆ" ಎಂದು ಪುಣ್ಯಮ್ಮ ಹೇಳಿದಳೆಂದರೆ ಆ ಸೀರೆಗೆ ಗ್ರಾಚಾರ ಬಂತೆಂದೇ ಲೆಕ್ಕ. ಸೌದೆ ಒಲೆಯ ಕಿಡಿ ತಾಗಿ ವಟ್ಟೆಯಾಗಿಯೋ, ಕೂತೇಳುವಷ್ಟರಲ್ಲಿ ಪರ‍್ರನೆ ಹರಿದೋ, ಗೃಹಿಣಿಯ ಕಣ್ಣಲ್ಲಿ ನೀರು ಬರಿಸುತ್ತಿತ್ತು. "ಮೊದ್ಲೇ ಗೊತ್ತಿತ್ತು ನಂಗೆ. ಪುಣ್ಯಮ್ಮ ಬಾಯಿ ಕಳ್ಕಂಡು ಲಾಯ್ಕಿದೆ ಅಂದಾಗ್ಲೇ ಹಿಂಗಾಗುತ್ತೇಂತ ಗೊತ್ತಿತ್ತು..." ಎನ್ನುತ್ತಾ ಸಲೀಸಾಗಿ ಪುಣ್ಯಮ್ಮನ ಮೇಲೆ ಕೂರುತ್ತಿತ್ತು ಗೂಬೆ. ಇದೊಂದೇ ಅಂತಲ್ಲ. "ಮಾವಿನಮರದಲ್ಲಿ ಹೂ ಬಿಟ್ಟಿರೋ ಚಂದ ನೋಡ್ರೀ. ಮಿಡಿ ಬಂದ್ರೆ ಮೂರೊರ್ಷದ ಉಪ್ಪಿನಕಾಯಿಗೆ ಮೋಸ ಇಲ್ಲ" ಎನ್ನುವ ಮಾತು ಪುಣ್ಯಮ್ಮನ ಬಾಯಿಂದ ಉದುರಿ ಬಿತ್ತೆಂದರೆ ಅಡ್ಡಮಳೆ ಹೊಡೆದು, ಹೂಗಳು ಉದುರಿ, ಬಿಡಿ, ಯಾರೋ ಏನೋ ಹೇಳುತ್ತಾರೆಂದು ನನ್ನ ದನಿಯನ್ನೂ ಸೇರಿಸುವುದು ಅಂತರಾತ್ಮ ಒಪ್ಪುವ ಸಂಗತಿ ಅಲ್ಲ.

ಯಾವಾಗೆಂದರೆ ಆವಾಗ ಮನೆಗೆ ತುಕ್ಕುತ್ತಿದ್ದ ಪುಣ್ಯಮ್ಮ ಕ್ರಮೇಣ ಮನೆಗೆ ಬರುವುದು ಕಮ್ಮಿಯಾಗಿ ಕೊನೆಗೊಂದು ದಿನ ನಿಂತೇ ಹೋಯ್ತು. "ಮಗನ್ನ ಇಸ್ಕೂಲಿಗೆ ಸೇರ್ಸಿದಾಳಂತೆ. ಅದೊಂದು ಬಾಕಿ ಇತ್ತು" ಎನ್ನುವ ಮಾತು ಗಾಳಿಯಲ್ಲಿ ತೇಲಿತು. ಎಲ್ಲೋ ಒಂದು ನೆಲೆ ಕಂಡುಕೊಂಡಿದ್ದಳು ಪುಣ್ಯಮ್ಮ.

★★★

ನನ್ನ ಮದುವೆಯಾಗಿ, ಶಿವಮೊಗ್ಗಾ ಪೇಟೆ ಸೇರಿಕೊಂಡು, ಹದಿನೈದಿಪ್ಪತ್ತು ವರ್ಷಗಳ ದೀರ್ಘಕಾಲದ ನಂತರ ನನ್ನ ಮನೆ ಬಾಗಿಲಲ್ಲಿ ಪುಣ್ಯಮ್ಮನನ್ನು ನೋಡುತ್ತೇನೆಂದು ಕನಸಿನಲ್ಲೂ ನೆನೆಸಿದವಳಲ್ಲ ನಾನು. ಅಸಲಿಗೆ ಪುಣ್ಯಮ್ಮ ಎನ್ನುವ, ಮಗನನ್ನು ಹಿಂದಿಟ್ಟುಕೊಂಡು ಮನೆಮನೆ ಮೆಟ್ಟಿಲು ಹತ್ತಿಳಿದು ಜೀವನ ಮಾಡುತ್ತಿದ್ದ ಹೆಂಗಸು ನನ್ನ ನೆನಪಿನಿಂದ ಶಾಶ್ವತವಾಗಿ ಅಳಿಸಿ ಹೋಗಿದ್ದಳು. ಹಾಗೆ ನಾನು ಅಂದುಕೊಂಡಿದ್ದೆ. ಅದರಲ್ಲೂ ಪುಣ್ಯಮ್ಮ ಮನೆ ಬಾಗಿಲಿಗೆ ಬಂದ ಉದ್ದೇಶ ಎಂತದು? ರಟ್ಟೆ ಮುರೀ ಗೆಯ್ದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಹೆಂಗಸಿಗೆ ಈ